ಇಂದು ದಿನಾಂಕ:08.02.2024 ರಂದು ಪಿಡಬ್ಲ್ಯೂ:1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು:**</u> ಪ್ರತಿವಾದಿ1 ಮತ್ತು 2 ರವರ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:

1. ನಾನು ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡಿದ್ದೇನೆ. ನಿಪಿ-1 ರಲ್ಲಿ ದಾವಾ ಆಸ್ತಿಯ ಉಲ್ಲೇಖ ಇಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್ 2 ನೇ ಆಸ್ತಿ 2 ಎಕರೆ 6 ಗುಂಟೆ ವಿಸ್ತೀರ್ಣ ಇದ್ದು ಅದರಲ್ಲಿ 23 ಗುಂಟೆ ಖರಾಬು ಇದೆ. ಆ ಜಮೀನಿನ ಯಾವುದಾದರೂ ದಿಕ್ಕಿಗೆ ರಸ್ತೆ ಬರುತ್ತದಾ ಎಂದರೆ ಸಾಕ್ಷಿಯು ಉತ್ತರದಿಂದ ದಕ್ಷಿಣ ದಿಕ್ಕಿಗೆ ಜಮೀನಿನ ಮಧ್ಯಭಾಗದಲ್ಲಿ ರಸ್ತೆ ಇದೆ ಎಂದು ನುಡಿಯುತ್ತಾರೆ. ಆ ರಸ್ತೆ ಜಮೀನಿನ ಪೂರ್ವ-ಪಶ್ಚಿಮ ಭಾಗದಲ್ಲಿ ಬರುತ್ತದೆ. ದಾವೆ ದಾಖಲು ಮಾಡುವ ಕಾಲಕ್ಕೆ ರಸ್ತೆಯ ಚಕ್ಕುಬಂದಿ ತೋರಿಸಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು, ರಸ್ತೆಯ ಎರಡು ಬದಿಗಳಲ್ಲಿ ದಾವಾ ಷೆಡ್ಯೂಲ್ 2 ನೇ ಆಸ್ತಿ ಬರುವುದರಿಂದ ತೋರಿಸಿಲ್ಲ ಎಂದರೆ ನುಡಿಯುತ್ತಾರೆ. ರಸ್ತೆಯ ಪೂರ್ವ ದಿಕ್ಕಿಗೆ ದಾವಾ ಷೆಡ್ಯೂಲ್ 2 ನೇ ಆಸ್ತಿಯ ಸರ್ವೆ ನಂಬರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ.

2. ಮಲ್ಲಮ್ಮ ಎಂಬುವವರು ನನ್ನ ಚಿಕ್ಕಪ್ಪನ ಹೆಂಡತಿ. ಅವರು ಮರಣ ಹೊಂದಿರುತ್ತಾರೆ. ಈಗ ಅವರು ವಾರಸುದಾರರು ಯಾರಿದ್ದಾರೆ ಎಂದರೆ ಸಾಕ್ಷಿಯು ನಾನೇ ವಾರಸುದಾರ ಎಂದು ನುಡಿಯುತ್ತಾರೆ. ಮಲ್ಲಮ್ಮರವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಮಲ್ಲಮ್ಮರವರ ಮರಣದ ನಂತರ ಆಸ್ತಿ ನನ್ನ ಅಣ್ಣನ ಹೆಸರಿಗೆ ಮರಣಶಾಸನದ ಮೂಲಕ ಬಂದಿದ್ದು ಅವರಿಂದ ನಾನು ಸ್ವಲ್ಪ ಆಸ್ತಿಯನ್ನು ಖರೀದಿಗೆ ಪಡೆದಿರುತ್ತೇನೆ. ಅದರ ಸರ್ವೆ ನಂ.58/1 ಮತ್ತು 58/6 ಇರುತ್ತದೆ. ನಿಪಿ-1 ರ ಪ್ರಕಾರ ಬಿ ಷೆಡ್ಯೂಲ್ ಆಸ್ತಿಗಳು ನನ್ನ ಅಣ್ಣನಾದ ಸೋಮೆಗೌಡರವರಿಗೆ ಸೇರಿದ್ದು. ಅವರ ಆಸ್ತಿಗಳು ಈಗ ಅವರ ಮಗ ಜಯರಾಂರವರ ಹೆಸರಿನಲ್ಲಿದೆ. ಬಿ.ಡಿ.ಮಹೇಶ್ ಎಂಬುವವರು ಬಿ.ಎಂ.ದೇವೆಗೌಡರವರ ಮಗ. ಅವರು ನಮ್ಮ ಕುಟುಂಬದವರಲ್ಲ. ಆದರೆ ನಮ್ಮ ಆಸ್ತಿಗಳ ಬಾಜುದಾರರು. ದಾವಾ ಷೆಡ್ಯೂಲ್ 1 ನೇ ಆಸ್ತಿಯ ಬಗ್ಗೆಯೂ ಸಹ ನಿಪಿ-1 ವಿಭಾಗಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಅಚ್ಚು ಬಿಟ್ಟು ಹೋಗಿದೆ ಎಂದು ನುಡಿಯುತ್ತಾರೆ.

3. ಬಿದರಹಳ್ಳಿ ಗ್ರಾಮದ ಸರ್ವೆ ನಂ.54 ರಲ್ಲಿ ಒಟ್ಟು 3 ಪೋಡಿಗಳು ಇವೆ. 1 ನೇ ಪೋಡು ಮತ್ತು 3 ನೇ ಪೋಡಿನ ಆಸ್ತಿಗಳು ಮುಸ್ಲಿಂ ಸಮುದಾಯದವರಿಗೆ ಸೇರಿದೆ. ಅವರ ಹೆಸರುಗಳು ನನಗೆ ಗೊತ್ತಿಲ್ಲ. ಈಗಲೂ ಸಹ ಆ 2 ಪೋಡುಗಳು ಅವರ ಸ್ವಾಧೀನದಲ್ಲಿದೆ. ದಾವಾ ಷೆಡ್ಯೂಲ್ 1 ನೇ

ಆಸ್ತಿಯ ಪಶ್ಚಿಮ ದಿಕ್ಕಿಗೆ ಪಂಚಾಯಿತಿ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ದಾವಾ ಷೆಡ್ಯೂಲ್ 2 ನೇ ಆಸ್ತಿ ಬರುತ್ತದೆ ಎಂದು ನುಡಿಯುತ್ತಾರೆ. ಪಶ್ಚಿಮದಲ್ಲಿ ಪಂಚಾಯಿತಿಯ ರಸ್ತೆ ಇದ್ದರೂ ಸಹ, ನಾನು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಮತ್ತು ಸುಳ್ಳು ಚಕ್ಕುಬಂದಿ ನೀಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 1 ನೇ ಆಸ್ತಿಯ ದಕ್ಷಿಣ ದಿಕ್ಕಿಗೆ ಮಲ್ಲಮ್ಮರವರ ಆಸ್ತಿ ಬರುತ್ತದೆ ಎಂದರೆ ಸಾಕ್ಷಿಯು ಬಿ.ಬಿ ಮಂಜೇಗೌಡ, ನಂಜುಂಡೇಗೌಡ ಮತ್ತು ಪ್ರತಿವಾದಿ 3 ರವರ ಆಸ್ತಿ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ 1 ನೇ ಆಸ್ತಿಯ ಉತ್ತರ ದಿಕ್ಕಿಗೆ ಬಿ.ಕೆ ರಾಮಯ್ಯರವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಪ್ರತಿವಾದಿ 1 ರವರ ಆಸ್ತಿ ಬರುತ್ತದೆ ಎಂದು ನುಡಿಯುತ್ತಾರೆ. ಬಿ.ಕೆ ರಾಮಯ್ಯರವರು ಮರಣ ಹೊಂದಿರುತ್ತಾರೆ. 1 ನೇ ಪ್ರತಿವಾದಿಯ ತಂದೆಯ ಹೆಸರು ಬಿ.ಕೆ. ಬಾಸಯ್ಯ. ದಾವಾ ಷೆಡ್ಯೂಲ್ 1 ನೇ ಆಸ್ತಿಯ ಚಕ್ಕುಬಂದಿಯನ್ನು ತಪ್ಪು ನೀಡಿದ್ದೇನೆ ಎಂದರೆ ಸರಿಯಲ್ಲ. ವಿಭಾಗಪತ್ರದಲ್ಲಿ ನೀಡಿರುವ ಚಕ್ಕುಬಂದಿಗೂ ಮತ್ತು ವಾದಪತ್ರದಲ್ಲಿ ನೀಡಿರುವ ಚಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಅಕ್ರಮವಾಗಿ ಹೊಂದುವ ಉದ್ದೇಶದಿಂದ ಸುಳ್ಳು ಚಕ್ಕುಬಂದಿ ನೀಡಿದ್ದೇನೆ ಎಂದರೆ ಸರಿಯಲ್ಲ.

4. ಈ ಹಿಂದೆ ಪ್ರತಿವಾದಿ 1 ಮತ್ತು 2 ರವರ ಬಂದು ನನ್ನ ಆಸ್ತಿಗೆ ಬಂದು ಅಕ್ರಮ ಫಸಲು ಪಡೆದಿದ್ದಾರೆ ಎಂದು 1 ನೇ ಪ್ರತಿವಾದಿಯ ವಿರುದ್ಧ 6 ಲಕ್ಷ ಪರಿಹಾರಕ್ಕಾಗಿ ಮತ್ತು 2 ನೇ ಪ್ರತಿವಾದಿಯ ವಿರುದ್ಧ 33 ಲಕ್ಷಗಳ ಪರಿಹಾರಕ್ಕಾಗಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಆ 2 ದಾವೆಗಳು ವಜಾ ಆಗಿರುತ್ತದೆ ಎಂದರೆ ಸರಿ. ಆದ್ದರಿಂದ, ಪ್ರತಿವಾದಿಗಳ ವಿರುದ್ಧ ನನಗೆ ದ್ವೇಷ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು, ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಯಾವುದೇ ಮೇಲ್ಮನವಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ಮೇಲ್ಮನವಿಗಳ ಬಗ್ಗೆ ಈ ದಾವೆಯಲ್ಲಿ ಯಾವುದೇ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿ. ಪ್ರತಿವಾದಿಗಳು ಸ್ವಾಧೀನ ಹೊಂದಿದ್ದ, ದಾವಾ ಷೆಡ್ಯೂಲ್ 2 ನೇ ಆಸ್ತಿಯ 6 ಗುಂಟೆ ಮತ್ತು ದಾವಾ ಷೆಡ್ಯೂಲ್ 1 ನೇ ಆಸ್ತಿಯ 26 ಗುಂಟೆ ಆಸ್ತಿಯ ಸ್ವಾಧೀನವನ್ನು ನಾನು ವಾಪಾಸು ಪಡೆದುಕೊಂಡಿರುತ್ತೇನೆ ಎಂದು ನ್ಯಾಯಾಲಯದಲ್ಲಿ ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ. ಆ ನಂತರವೂ ಸಹ ಆ ಆಸ್ತಿಗನ್ನು ಅಳತೆ ಮಾಡಬೇಕೆಂದು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ಇಲಾಖೆಗೆ ಪೊಲೀಸ್ ಮುಖಾಂತರ ಅರ್ಜಿ ಸಲ್ಲಿಸಿದ್ದೆ. ಪ್ರತಿವಾದಿಗಳಿಂದ ವಾಪಾಸು ಪಡೆದುಕೊಂಡು ಸ್ವಾಧೀನದ ಆಸ್ತಿಯ ಜೊತೆಗೆ ಪ್ರತಿವಾದಿಗಳ ಸ್ವತ್ತನ್ನು ಸೇರಿಸಿ ನಾನು ಬೇಲಿ ಹಾಕಲು ಪ್ರಯತ್ನಿಸಿದ್ದೆ ಎಂದರೆ ಸುಳ್ಳು. ಆದ್ದರಿಂದ, ಪ್ರತಿವಾದಿಗಳು ನನ್ನ ವಿರುದ್ಧ ಅಸಲು ದಾವಾ

ಸಂ.164/2016 ರಂತೆ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ.

5. ಆ ದಾವೆಯಲ್ಲಿಯೂ ಸಹ ನನ್ನ ಜಾಗದ ಗಡಿ ಗುರುತು ಇಲ್ಲದಕಾರಣ ಆಸ್ತಿಯನ್ನು ಅಳತೆ ಮಾಡಿಸಲು ಕಮೀಶನರ್ ನೇಮಕ ಮಾಡಲು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು, ಪ್ರತಿವಾದಿಗಳು ನನಗೆ ವಾಪಾಸು ನೀಡಿದ ಜಮೀನಿನ ಬಳಿ ಬೇಲಿ ಇಲ್ಲದ ಕಾರಣ ಆ ರೀತಿ ಅರ್ಜಿ ಸಲ್ಲಿಸಿದ್ದೇವು ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿ. ಅದರ ವಿರುದ್ದ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಅವರು ಸಲ್ಲಿಸಿದ ದಾವೆ ಡಿಕ್ರಿಯಾಗಿದೆ ಎಂದರೆ ಸರಿ. ಸಾಕ್ಷಿಯು ನಮ್ಮ ಜಾಗವನ್ನು ಹೊರತುಪಡಿಸಿ ಅವರ ಜಾಗಕ್ಕೆ ನಿರ್ಬಂದಕಾಜ್ಞೆ ನೀಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ವಿರುದ್ದ ನಿರ್ಬಂದಕಾಜ್ಞೆ ನೀಡಿದ ಕಾರಣ ವೈಯಕ್ತಿಕ ದ್ವೇಷದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಆಸ್ತಿಗಳನ್ನು ಅಳತೆ ಮಾಡಿಸಲು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಬೇಲಿ ಇಲ್ಲದ ಕಾರಣ ಬೇಲಿ ಹಾಕಿಸಿಕೊಳ್ಳಲು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ಸೇರಿದ ಜಾಗದಲ್ಲಿ ಸ್ವಲ್ಪ ಜಾಗ ನನ್ನ ಜಾಗ ಸೇರಿದೆ ಎಂದು ಅನಿಸಿಕೆಯಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು, ಪ್ರತಿವಾದಿಗಳು ನಮಗೆ ಸ್ವಾಧೀನವಹಿಸಿಕೊಟ್ಟ ಜಾಗದಲ್ಲಿ ಬೇಲಿ ಇಲ್ಲ ಹಾಗೂ ಬೇಲಿ ಹಾಕಲು ಬಿಡುತ್ತಿಲ್ಲ ಎಂದು ನುಡಿಯುತ್ತಾರೆ. ಗಡಿಗುರುತು ಸರಿಯಾಗಿ ತಿಳಿದ ಕಾರಣ ನಾನು ಪದೇ ಪದೇ ಸರ್ವೇಗೆ ಅರ್ಜಿ ಸಲ್ಲಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ನನಗೆ ಸೇರಿದ ಜಾಗವನ್ನು ಒತ್ತುವರಿ ಮಾಡುವ ಆಸಕ್ತಿ ಮತ್ತು ಅಗತ್ಯ ಇಲ್ಲ ಎಂದರೆ ಸುಳ್ಳು.

6. ಪ್ರತಿವಾದಿ 1 ಮತ್ತು 2 ರವರು ನನ್ನ ಆಸ್ತಿಗೆ ಅತಿಕ್ರಮಣ ಪ್ರವೇಶ ಮಾಡಲು ಪ್ರಯತ್ನಿಸಿರುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಅಣ್ಣ ಪೊಲೀಸ್ ಇಲಾಖೆಯಲ್ಲಿದ್ದರು ಎಂದರೆ ಸರಿ. ಸಾಕ್ಷಿಯು ಅವರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಅವರ ಮಗಳು ಪಿ.ಡಿ.ಓ ಆಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಇಬ್ಬರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆದ್ದರಿಂದ, ಪ್ರತಿವಾದಿ 1 ಮತ್ತು 2 ರವರು ಗೌರವಯುತ ಕುಟುಂಬಕ್ಕೆ ಸೇರಿದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡುವ ಸಾದ್ಯತೆ ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಹಳೇ ಮೂಡಿಗೆರೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ವಿಶ್ವ ಹಿಂದೂ ಪರಿಷತ್ ಸಂಸ್ಥೆಯ ಅಧ್ಯಕ್ಷರಾಗಿದ್ದರು ಎಂದರೆ ಇರಬಹುದು. ನಾನು ನೆರಹೊರೆಯವರೊಂದಿಗೆ ಯಾವಾಗಲೂ ವ್ಯಾಜ್ಯ ಮಾಡುವ ಸ್ವಭಾವ ಹೊಂದಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ಮಕ್ಕಳೂ ಸಹ ನನ್ನ ಜೊತೆ

ಇಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನ ಮಗನಾನ ಜಯರಾಮೇಗೌಡ ಕಾಫಿ ಬೋರ್ಡ್‌ನ ಸದಸ್ಯರು ಎಂದರೆ ಸರಿಯಲ್ಲ. ಅವರು ಕಾಫಿ ಬೆಳೆಗಾರ ಸಂಘದ ಅಧ್ಯಕ್ಷರು ಎಂದರೆ ಸರಿ. ಅವರೂ ಸಹ ನೆರಹೊರೆಯವರೊಂದಿಗೆ ತಕರಾರ ಮಾಡಬಾರದೆಂದು ಬುದ್ದಿವಾದ ಹೇಳಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ವಿರುದ್ದ ನಿರ್ಬಂದಕಾಜ್ಞೆಯನ್ನು ಪಡೆದು ಅದನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಕಿರುಕುಳ ನೀಡುವ ಉದ್ದೇಶದಿಂದ ಈ ಸುಳ್ಳು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸ

7. ವಿಭಾಗಪತ್ರದಲ್ಲಿ ಮತ್ತು ವಾದಪತ್ರದಲ್ಲಿರುವ ಚಕ್ಕುಬಂದಿ ಬೇರೆ ಬೇರೆ ಇರುವ ಕಾರಣದಿಂದ ಅದನ್ನು ಸರಿಪಡಿಸಬೇಕೆಂದು ನಾನು ಉಪನೋಂದಣಾದಿಕಾರಿಗೆ ಅರ್ಜಿ ಸಲ್ಲಿಸಿಲ್ಲ. ಪ್ರತಿವಾದಿ 1 ಮತ್ತು 2 ರವರಿಂದ ಸ್ವಾಧೀನ ಪಡೆದುಕೊಂಡ ಕಾಲಕ್ಕೆ ಹಾಕಿದ್ದ ಬೇಲಿ ಈಗಲೂ ಇದೆ ಎಂದರೆ ಸುಳ್ಳು. ಸಾಕ್ಷಿಯು ಪ್ರತಿವಾದಿಗಳು ಅದನ್ನು ಕಿತ್ತು ಹಾಕಿದ್ದಾರೆ ಎಂದು ನುಡಿಯುತ್ತಾರೆ. ಬೇಲಿ ಕಿತ್ತು ಹಾಕಿದ್ದ ಬಗ್ಗೆ ನಾನು  ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಆ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ನಾನು ಹಾಕಿದ್ದ ಬೇಲಿಯನ್ನು ಪ್ರತಿವಾದಿಗಳು ಕಿತ್ತು ಹಾಕಿದ್ದಾರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು, ಅಸಲು ದಾವಾ ಸಂ.164/2016 ರಲ್ಲಿ ಪ್ರತಿವಾದಿ 1 ಮತ್ತು 2 ರವರೆ ಬೇಲಿ ಕಿತ್ತು ಹಾಕಿರುವ ಬಗ್ಗೆ ಒಪ್ಪಿದ್ದಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಪ್ರತಿವಾದಿ 1 ಮತ್ತು 2 ರವರು ಬೇಲಿ ಕಿತ್ತು ಹಾಕಿದ್ದಾರೆ ಎಂದು ಒಪ್ಪಿಕೊಂಡಿದ್ದಾರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಈಗ ನನ್ನ ಸ್ವಾಧೀನ ಮತ್ತು ಪ್ರತಿವಾದಿ 1 ಮತ್ತು 2 ರವರ ಸ್ವಾಧೀನದ ನಡುವೆ ಗಿಡಗಳನ್ನು ನೆಟ್ಟಿ ಬೆಳೆಸಿರುವ ಬೇಲಿ ಇದೆ ಎಂದರೆ ಸರಿಯಲ್ಲ. ಆ ಬೇಲಿಯನ್ನು ದಾಟಿ ಪ್ರತಿವಾದಿಯವರ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಇಚ್ಚೆ ಹೊಂದಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ